International Journal of Kannada Research 2018; 4(4): 35-37



International Journal of Kannada Research
www.kannadajournal.com

**ISSN: 2454–5813**
IJKR 2018; 4(4): 35-37
© 2018 IJKR
www.kannadajournal.com
Received: 09-08-2018
Accepted: 10-09-2018

ರಾಹುಲಬಸಪ್ಪಾ
ಸಂಶೋಧನ ವಿದ್ಯಾರ್ಥಿ, ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
ರಾಹುಲಬಸಪ್ಪಾ
ಸಂಶೋಧನ ವಿದ್ಯಾರ್ಥಿ, ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ರಂಗ ಪರದೆ ಕಲೆ ಮತ್ತು ಕಲಾವಿದ

ರಾಹುಲಬಸಪ್ಪಾ

ರಂಗಭೂಮಿ ಎನ್ನುವುದು ಒಂದು ಜೀವಂತ ಕಲೆ. ಎಲ್ಲರಲ್ಲಿ ಈ ಕಲೆ ಅಡಗಿರುವುದಿಲ್ಲ. ಅಭಿನಯ ರೂಪದ ಈ ಕಲೆ ಕೆಲವರಲ್ಲಿ ವಂಶಪಾರಂಪರೆಯಾಗಿ ಬಂದಿರುತ್ತದೆ. ಮತ್ತೆ ಕೆಲವರಲ್ಲಿ ಕಲಿಕೆಯ ಮುಖಾಂತರ ಬರುತ್ತದೆ. ಆಧುನಿಕ ಯುಗದತ್ತ ನಾವು ಸಾಗುತ್ತಿರುವುದರಿಂದ ವೈಜ್ಞಾನಿಕ ಜೀವನ ಶೈಲಿ ಅಳವಡಿಸಿಕೊಳ್ಳುವುದರಿಂದ ನಾವು ನಮ್ಮ ಪರಂಪರೆಯನ್ನು ಸಂಪೂರ್ಣವಾಗಿ ಮರೆಯುತ್ತಿದ್ದೇವೆ. ಆಚಾರ–ವಿಚಾರ, ಆಚರಣೆ, ನಂಬಿಕೆ, ಸಂಸ್ಕೃತಿ ಎಲ್ಲವನ್ನು ಮರೆತು ನಾವು ಇಂದು ಆಧುನಿಕರಣದತ್ತ ಮುನ್ನುಗ್ಗುತ್ತಿದ್ದೇವೆ. ನಾವು ಎಷ್ಟೇ ವೈಜ್ಞಾನಿಕವಾಗಿ ಮುಂದುವರೆದರೂ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮರೆಯಬಾರದು. ಭವ್ಯವಾದ ಭಾರತ ತನ್ನದೇ ಆದ ಇತಿಹಾಸ, ಕಲೆ, ಸಂಸ್ಕೃತಿಯನ್ನು ಹೊಂದಿದ್ದು, ಇತಿಹಾಸದ ಪುಟದಲ್ಲಿ ಅಚ್ಚಳಿಯಾಗಿದೆ.

ಭರತಮುನಿಯ ನಾಟ್ಯಶಾಸ್ತ್ರ ನಟನೆಗಿಂತಲೂ ಪೂರ್ವದಲ್ಲಿ ದೇಸಿ ರಂಗ ಚಟುವಟಿಕೆಗಳು ಹಾಗೂ ರಂಗ ಮಂಟಪಗಳು ಹೇಗಿದ್ದವು ಎಂಬುದು ವಿವರಣೆ ತಿಳಿದುಬರುತ್ತದೆ. ಭರತ ನಾಟ್ಯ ಶಾಸ್ತ್ರದ ಪ್ರಕಾರ ಮನೋರಂಜನೆಗಾಗಿ ನಾಟಕ ಆಡುವುದು ತುಂಬಾ ಮುಖ್ಯವಾಗಿತ್ತು. ಅಂದು ನಾಟಕಗಳು ಊರ ಮಧ್ಯದಲ್ಲಿ ಬಯಲು ಪ್ರದೇಶದಲ್ಲಿ ದೊಡ್ಡ ಅಟ್ಟದ ಮೇಲೆ ಆಡುತ್ತಿದ್ದರು. ಸಾವಿರಾರು ಜನರು ಒಟ್ಟಿಗೆ ಕುಳಿತುಕೊಂಡು ನಾಟಕವನ್ನು ವೀಕ್ಷಣೆ ಮಾಡಬಹುದಿತ್ತು. ಪ್ರಸ್ತುತ ಆಧುನಿಕ ಯುಗದ ಹಾಗೆ ಅಂದು ರಂಗಚಟುವಟಿಕೆಗಳು ಹಣ ಗಳಿಕೆಗಾಗಿ ನಡೆಯುತ್ತಿರಲಿಲ್ಲ. ಮನೋರಂಜನೆ ಅಲ್ಲದೆ, ಅವರು ತಮ್ಮ ದಣಿವು, ಆಯಾಸ ಕಳೆಯುವುದಕ್ಕಾಗಿ ರಂಗ ನಾಟಕಗಳನ್ನು ಆಡುತ್ತಿದ್ದರು. ಬೇಸಿಗೆ ಸಮಯದಲ್ಲಿ ರಂಗ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿದ್ದವು. ಬೇಸಿಗೆಯಲ್ಲಿ ಎಲ್ಲ ಕೃಷಿ ಚಟುವಟಿಕೆಗಳು ಮುಗಿದು ಜನರು ಕೆಲಸವಿಲ್ಲದೆ ಮನೆಯಲ್ಲಿ ಇರುತ್ತಿದ್ದರು. ತಮ್ಮ ಬೇಸರ ಕಳೆಯಲು ಅವರು ರಂಗ ಚಟುವಟಿಕೆಯಲ್ಲಿ ತೊಡಗುತ್ತಿದ್ದರು.

ರಂಗಚಟುವಟಿಕೆಗಳು ನಡೆಯುವ ಸಮಯದಲ್ಲಿ ರಾಕ್ಷಸರಿಂದ ವಿಘ್ನಗಳು ಉಂಟಾಗುತ್ತಿದ್ದವು. ಇದರಿಂದ ತಪ್ಪಿಸಿಕೊಳ್ಳಲು ಅವರು ರಂಗ ಮಂಟಪಗಳನ್ನು ನಿರ್ಮಾಣ ಮಾಡಿಕೊಂಡು ಅಲ್ಲಿಯೇ ರಂಗ ಚಟುವಟಿಕೆಗಳು ನಡೆಸುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದಲೇ ಅನೇಕ ರಂಗ ಸಜ್ಜಿಕೆಗಳು ಅನಾವರಣಗೊಂಡು ರಂಗಭೂಮಿಗೆ ತನ್ನದೇ ಆದ ಉತ್ತಮ ಪರಿಣಾಮವನ್ನು ಉಂಟು ಮಾಡಿದವು. ಪ್ರೋಡೀನಿಯಮ್, ಥೀಯೇಟರ್, ಪ್ರೋಸಿನಿಯಮ್ ಚೌಕಟ್ಟು, ಪಾಶ್ಚಾತ್ಯರಿಂದಲೇಂಬುದನ್ನು ಸಾಮಾನ್ಯವಾದ ಸಂಗತಿಯಾಗಿದೆ. ಇವು ನಮ್ಮ ಭಾರತ ಮೂಲದಿಂದಲೇ ಉದ್ಭವಿಸಿದ ವಿಚಾರಗಳನ್ನಲಿಕ್ಕೆ ಪ್ರಾಚೀನ ಜನಪದ ರಂಗಚಟುವಟಿಕೆಗಳು ಹಾಗೂ ನಾಟ್ಯಶಾಸ್ತ್ರ ಸಾಕ್ಷಿಯಾಗಿ ನಿಲ್ಲುತ್ತವೆ.

ರಂಗಭೂಮಿಯಲ್ಲಿ ನಾಟಕ ಪರದೆಗೆ ತನ್ನದೇ ಆದ ಮಹತ್ವವಿದೆ. ನಾಟಕ ಪರದೆ ಇರದಿದ್ದರೆ ಆ ನಾಟಕದ ಪಾತ್ರಧಾರಿಗಳು ಎಷ್ಟು ಸುಂದರ ಇದ್ದು ಉತ್ತಮವಾದ ಅಭಿನಯ ಮಾಡಿದರೂ ಅದಕ್ಕೆ ಮಹತ್ವಬಾರದು, ಏಕೆಂದರೆ ಒಂದು ಉತ್ತಮವಾದ ನಾಟಕ ಜನಪ್ರಿಯಗೊಳ್ಳಬೇಕಾದರೆ ಅದಕ್ಕೆ ರಂಗ ಪರದೆ ತುಂಬಾ ಮಹತ್ವವಾಗಿದೆ. ಬಣ್ಣ ಬಣ್ಣದಿಂದ ಮಾಡಿರುವ ಈ ನಾಟಕ ಪರದೆಗಳು ನೋಡುಗರಲ್ಲಿ ಆನಂದವನ್ನುಂಟು ಮಾಡುತ್ತವೆ. ಈ ಪರದೆಗಳು ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಲಾಗುತ್ತದೆ. ಉದಾ: ಮದುವೆ ಸಂದರ್ಭ ಬಂದರೆ ಮದುವೆಯ ಪರದೆಯನ್ನು, ನೃತ್ಯ ಬಂದರೆ ಉದ್ಯಾನವನದ ಪರದೆಯನ್ನು ಯಾವುದೇ ಸನ್ನಿವೇಶ ಬಂದರೂ ಅದಕ್ಕೆ ತಕ್ಕಂತೆ ಪರದೆಯನ್ನು ಅಳವಡಿಸಿರುತ್ತಾರೆ. ಒಂದರ ನಂತರ ಒಂದರಂತೆ ಅವುಗಳನ್ನು ಬದಲಾಯಿಸಲಾಗುತ್ತದೆ. ರಾಜ–ಮಹಾರಾಜರ ಪಾತ್ರ ಬಂದರೆ ಸುಂದರವಾದ ಅರಮನೆಯ ಪರದೆಯನ್ನು ಹಾಕಿ ಪರದೆಯ ಮೇಲೆ ಅರಮನೆಯನ್ನು ಜೀವಂತವಾಗಿ ಇಡುವುದಕ್ಕೆ ಪ್ರಯತ್ನ ಪಡುತ್ತಾರೆ. ನಾವು ನಾಟಕವನ್ನು ನೋಡುತ್ತಿರುವಾಗ ಒಂದೊಂದು ಸಾರಿ ಮಗ್ನರಾಗಿ ಬಿಡುತ್ತೇವೆ. ಏಕೆಂದರೆ ಆ ಸುಂದರ ಸನ್ನಿವೇಶ ಮತ್ತು ನಾಟಕ ಪರದೆಯ ಕಲಾ ಚಿತ್ರವನ್ನು ಕಂಡು ಒಂದು ಕ್ಷಣ ಬೆರಗಾಗುವ ಸಾಧ್ಯತೆಗಳಿವೆ.

ನಾಟಕ ಪರದೆ ವರ್ಣ ಪಾತ್ರದಲ್ಲಿ ಪರಿಸರದ ಪರಿಣಾಮಗಳನ್ನು ನೇರವಾಗಿ ಪ್ರತಿಬಿಂಬಿಸುವ ಒಂದು ಉತ್ತಮವಾದ ವಿಧಾನ ಎನ್ನಬಹುದು. ಈ ವಿಧಾನವನ್ನು ಅನುಸರಿಸುವುದರಿಂದ ನೋಡುಗನಿಂದ ವಸ್ತುಗಳ ದೂರವನ್ನು ತೋರಿಸಿ

ಪಾತ್ರದಲ್ಲಿ ಆಳವನ್ನು ಬಿಂಬಿಸಬಹುದು. ವಸ್ತುಗಳು ನೋಡುಗನಿಂದ ದೂರವಿದ್ದಂತೆ ನೀಲದಿಂದ ತಿಳಿನೀಲವಾಗಿ ಗೋಚರಿಸುತ್ತವೆ. ಇದರಿಂದ ಚಿತ್ರದಲ್ಲಿನ ವಸ್ತುಗಳ ದೂರವನ್ನು ಗುರುತಿಸಬಹುದು.

ರಂಗ ಪರದೆಗಳನ್ನು ನೈಜವಾಗಿ ಕೈಯಿಂದ ಬಿಡಿಸಿದ ವರ್ಣ ಚಿತ್ರಗಳು ನೋಡುವುದಕ್ಕೆ ತುಂಬಾನೆ ಆಕರ್ಷಕವಾಗಿರುತ್ತವೆ. ಇಂತಹ ಚಿತ್ರವನ್ನು ಬಿಡಿಸುವುದಕ್ಕೆ ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಬಣ್ಣ ಬಣ್ಣದಿಂದ ಕಲಾಕೃತಿಗಳನ್ನು ಬಿಡಿಸಿ ಸುಂದರವಾದ ನಾಟಕ ಪರದೆ ತಯಾರಿಸುವುದು ಸುಲಭದ ಕೆಲಸವಲ್ಲ. ತಾಳ್ಮೆ ಶಕ್ತಿ ಬೇಕಾಗುತ್ತದೆ. ನಮ್ಮ ಹತ್ತಿರ ತಾಳ್ಮೆ ಗುಣ ಇಲ್ಲದಿದ್ದರೆ ನಾವು ಸುಂದರ ರಂಗ ಪರದೆಯನ್ನು ತಯಾರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಪೌರಾಣಿಕ ನಾಟಕಗಳಾಗಲಿ, ಸಾಮಾಜಿಕ ನಾಟಕಗಳಾಗಲಿ ಮೂಲ ರೂಪವಾಗಿ ಕೆಲಸ ಮಾಡುವಂತಹದ್ದು ನಾಟಕ ಪರದೆಗಳು ಮತ್ತು ವೇದಿಕೆ. ನಮಗೆ ನಾಟಕ ಅಂದಾಕ್ಷಣ ಕಲಾವಿದರು, ಹಾಸ್ಯ ನಟರು ಹಲವಾರು ವ್ಯಕ್ತಿಗಳು ನೆನಪಿಗೆ ಬರುತ್ತವೆ. ಆದರೆ ಮೂಲ ರೂಪವಾದಂತಹ ನಾಟಕಕ್ಕೆ ಬೇಕಾಗುವಂತಹ ಸಲಕರಣೆಗಳ ಬಗ್ಗೆ ನಾವುಗಳು ಯೋಚಿಸುವುದಿಲ್ಲ. ಈ ಸಲಕರಣೆಗಳು ಇಲ್ಲದಿದ್ದರೆ ನಾಟಕದ ಆನಂದವನ್ನು ಆಸ್ವಾದಿಸಲು ಖಂಡಿತ ಸಾಧ್ಯವಿಲ್ಲ. ಪೌರಾಣಿಕ ನಾಟಕಗಳಾಗಲಿ, ಸಂಪ್ರದಾಯಿಕ ನಾಟಕಗಳಾಗಲಿ, ಸಾಮಾಜಿಕ ನಾಟಕಗಳಾಗಲಿ, ಮೂಲ ವಸ್ತುಗಳ ಬಗ್ಗೆ ನಾವುಗಳು ಯೋಚಿಸಿದಾಗ ಅದರ ಹಿಂದಿನ ಶ್ರಮ, ಶ್ರೇಯಸ್ಸು ಕೇವಲ ಚಿತ್ರಕಲಾವಿದರಿಗೆ ಮಾತ್ರ ಸಲ್ಲಬೇಕಾಗುತ್ತದೆ. ಒಂದೊಳ್ಳೆಯ ನಾಟಕ ಕಂಪನಿಗಳಿಗೆ ಪ್ರಮುಖವಾಗಿ ಚಿತ್ರಕಲಾವಿದರು ಬಹಳ ಮುಖ್ಯವಾಗುತ್ತಾ ಹೋಗುತ್ತಾರೆ.

ನಾಟಕ ಪರದೆಗಳ ಪ್ರಮುಖವಾದ ಪಟ್ಟಿಯನ್ನು ನಾವು ಈ ಕೆಳಗಿನಂತೆ ನಮೂದಿಸಲು ಸಾಧ್ಯ.

- ರಸ್ತೆ ಪರದೆಗಳು, ಕಾಡಿನ ಪರದೆಗಳು, ಯುದ್ಧದ ಪರದೆಗಳು, ಅರಮನೆಯ ಪರದೆಗಳು, ಸ್ಮಶಾನ ದೃಶ್ಯದ ಪರದೆಗಳು, ರಾಮಾಯಣ ಮತ್ತು ಮಹಾಭಾರತದ ಪರದೆಗಳು, ದರ್ಬಾರಿನ ರಸ್ತೆಯ ಪರದೆಗಳು, ದೊಡ್ಡ ದೊಡ್ಡ ಕಟ್ಟಡಗಳ ಪರದೆಗಳು, ಸುಂದರವಾದ ಉದ್ಯಾನವನದ ಪರದೆಗಳು, ಐತಿಹಾಸಿಕ ಕಟ್ಟಡವುಳ್ಳ ಪರದೆಗಳು, ರಾಜ ಮಹಾರಾಜರ ಪಟ್ಟಾಭೀಷೇಕದ ಪರದೆಗಳು, ಗರಡಿ ಮನೆಯ ಪರದೆಗಳು, ದೇವಾನು ದೇವತೆಗಳ ಪರದೆಗಳು, ದೇವರ ಕಲ್ಪನೆ ಇರುವ ಕೈಲಾಸದ ಪರದೆಗಳು, ಸುಂದರವಾಗಿ ನೃತ್ಯ ಮಾಡುವ ಪರದೆಗಳು.

ಇನ್ನು ಹತ್ತು ಹಲವು ಪರದೆಗಳು ಈ ರಂಗ ಕಲೆಯಲ್ಲಿ ಬಳಸಲಾಗುತ್ತಿದ್ದು, ಇವು ರಂಗ ಪರದೆಯಲ್ಲಿ ತಮ್ಮದೇ ಆದ ಮಹತ್ವವನ್ನು ಪಡೆದುಕೊಂಡಿವೆ. ಸನ್ನಿವೇಶಕ್ಕೆ ತಕ್ಕಂತೆ ರಂಗ ಪರದೆಗಳು ಬದಲಾಯಿಸಿದರೆ ಆ ದೃಶ್ಯ ನೋಡುವುದಕ್ಕೆ ಚೆನ್ನಾಗಿರುತ್ತದೆ. ಒಂದು ವೇಳೆ ನಾವು ಪರದೆಯನ್ನು ಬದಲಾಯಿಸದಿದ್ದರೆ ಆ ಒಂದು ದೃಶ್ಯ ಸನ್ನಿವೇಶ ಸಂಭಾಷಣೆ ನೋಡುವುದಕ್ಕೆ ಅಷ್ಟೊಂದು ಸುಂದರವಾಗಿ ಕಾಣುವುದಿಲ್ಲ.

**ರಂಗಪರದೆಯ ಮಹತ್ವ:**

- ನಾಟಕ ರಂಗ ಪರದೆಗಳು ನಾಟಕವನ್ನು ನೋಡುಗರಲ್ಲಿ ಕುತೂಹಲ ಕೆರಳಿಸುತ್ತವೆ.
- ದೃಶ್ಯ ನೋಡುತ್ತಿದ್ದರೆ ಪ್ರಸ್ತುತ ನಡೆಯುತ್ತಿದ್ದಂತೆ ಗೋಚರಿಸುತ್ತದೆ.
- ರಂಗ ಪರದೆಯ ನಾಟಕ ನೋಡುಗರಲ್ಲಿ ಆ ದೃಶ್ಯದ ಸತ್ಯ ಘಟನೆ, ನೈಜ ವಿಷಯ ಪರದೆಯು ಮುಖಾಂತರ ತಿಳಿಸಿಕೊಡುತ್ತದೆ.
- ಒಂದು ಸುಂದರವಾದ ನಾಟಕ ಪ್ರದರ್ಶನಗೊಳ್ಳಬೇಕಾದರೆ ರಂಗ ಪರದೆಯ ಮಹತ್ವ ತುಂಬಾ ಇದೆ.
- ಒಂದು ಸನ್ನಿವೇಶ ಆದನಂತರ ಮತ್ತೊಂದು ಸನ್ನಿವೇಶ ಬಂದರೆ ನೋಡುಗರಲ್ಲಿ ಆಶ್ಚರ್ಯ ಮತ್ತು ಸಂತೋಷ ಉಂಟಾಗುತ್ತದೆ.
- ಇಡೀ ನಾಟಕ ಮುಗಿಯುವವರೆಗೂ ಒಂದೇ ರಂಗ ಪರದೆ ಇದ್ದರೆ ಆ ನಾಟಕ ಕಳಪೆ ಎನಿಸಿಕೊಳ್ಳುತ್ತದೆ. ದೃಶ್ಯಗಳು ಬದಲಾಗುತ್ತಿದ್ದಂತೆ ರಂಗ ಪರದೆಗಳು ಬದಲಾದರೆ ನಾಟಕಕ್ಕೆ ನೈಜ ರೂಪ ಬಂದು ನೋಡುಗರಲ್ಲಿ ಮತ್ತಷ್ಟು ನೋಡುವ ಆಸೆ ಉಂಟಾಗುತ್ತದೆ.
- ಕಲಾವಿದರನು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಉತ್ತಮವಾದ ಪ್ರತಿಕ್ರಿಯೆ ಪಡೆಯುವದಕ್ಕೆ ರಂಗ ಪರದೆ ತುಂಬಾ ಅವಶ್ಯಕ.
- ಒಂದು ನಾಟಕ ಹತ್ತು ಹಲವು ದಿನ ಮುಂದುವರಿಯಲು ರಂಗಪರದೆ ತನ್ನದೆ ಆದ ಮಹತ್ವವನ್ನು ಪಡೆದುಕೊಂಡಿದೆ.
- ನೃತ್ಯ ಮಾಡುವ ಸಂದರ್ಭದಲ್ಲಿ ಉದ್ಯಾನವನದ ರಂಗ ಪರದೆ ಇದ್ದರೆ ಆ ನೃತ್ಯಕ್ಕೆ ಮತ್ತು ದೃಶ್ಯಕ್ಕೆ ಕಳೆ ಬರುತ್ತದೆಯಲ್ಲದೇ ಕಲಾವಿದರು ಗುರುತಿಸಿಕೊಳ್ಳುವಂತಾಗುತ್ತದೆ.

ಹೀಗೆ ರಂಗ ಪರದೆಯ ಮಹತ್ವ ವಿಶಿಷ್ಟ. ನಾವು ಒಂದು ನಾಟಕ ಸುಂದರವಾಗಿ ಮತ್ತು ನೈಜತೆಯಿಂದ ಕೂಡಿರುವಂತೆ ಬಿಂಬಿಸಲು ಈ ರಂಗ ಪರದೆಯ ಮಹತ್ವ ತುಂಬಾ ಇದೆ. ಜೀವನದಲ್ಲಿ ರಂಗ ಕಲಾವಿದರಿಗೆ ಹೆಚ್ಚಿನ ಮಹತ್ವ ಬರುವುದು ರಂಗ ಪರದೆ ಮುಂದೆ ಅವರು ತಮ್ಮ ಪ್ರತಿಭೆಯನ್ನು ತೋರಿಸಿದಾಗ ಮಾತ್ರ. ಎಷ್ಟು ದೊಡ್ಡ ಕಲಾವಿದರಿದ್ದರೂ ಬೆನ್ನ ಹಿಂದೆ ಪರದೆ, ಸುಂದರವಾದ ದೃಶ್ಯ ಇಲ್ಲದಿದ್ದರೆ ಅದಕ್ಕೆ ಮಹತ್ವ ಬರುವುದಿಲ್ಲ. ಕಲಾವಿದರಿಗೆ ಮತ್ತು ಒಂದು ಯಶಸ್ವಿ ನಾಟಕ ಆಗಬೇಕಾದರೆ ರಂಗಪರದೆ ಮಹತ್ವ ತುಂಬಾನೆ ಇದೆ ಎನ್ನುವುದು ಮೇಲಿನ ಮಾತಿನಿಂದ ಸ್ಪಷ್ಟವಾಗುತ್ತದೆ.

ಪ್ರಸ್ತುತ ನಾಟಕ ರಂಗಪರದೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಆಧುನಿಕ ತಂತ್ರಜ್ಞಾನ ಬಂದಿದ್ದರಿಂದ, ಎಲ್ಲಾ ರೀತಿಯ ದೃಶ್ಯವನ್ನು ಆಧುನಿಕ ತಂತ್ರಜ್ಞಾನದಿಂದ ತಯಾರು ಮಾಡುವುರಿಂದ ಕಲಾವಿದರು ತಯಾರಿಸಿದ ರಂಗಪರದೆಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ನಾವು ಇಂದು ಆಧುನಿಕ ಜಗತ್ತಿನತ್ತ ಧಾವಿಸುವುದರಿಂದ ನಾವೇ ನಮ್ಮ ಜೀವನವನ್ನು ಕೈಯಾರೆ ಹಾಳು ಮಾಡಿಕೊಂಡತ್ತಾಗುತ್ತಿದೆ. ತಿಂಗಳ ಗಟ್ಟಲೆ ಸಮಯ ತೆಗೆದುಕೊಂಡು ಒಂದು ಸುಂದರವಾದ ರಂಗಪರದೆಯನ್ನು ಚಿತ್ರಕಲಾವಿದ ರಚಿಸುತ್ತಾನೆ. ಆದರೆ ಇಂದು ತಂತ್ರಜ್ಞಾನದಿಂದ ಕ್ಷಣಾರ್ಧದಲ್ಲಿರುವ ಯಾವ ದೃಶ್ಯ ಬೇಕು, ಆ ದೃಶ್ಯವನ್ನು ಹೊರ ತೆಗೆಯುವುದರಿಂದ ಚಿತ್ರ ಕಲಾವಿದರು ಅತಂತ್ರ ಸ್ಥಿತಿಯಲ್ಲಿದ್ದಾರೆ. ತಂತ್ರಜ್ಞಾನದಿಂದ ಬಳಸಿ ಮಾಡಿರುವ ಪರದೆಗಳು ಬಹಳ ದಿನ ಬಾಳಿಕೆ ಬರುವುದಿಲ್ಲ. ಏಕೆಂದರೆ ಅವು ಬೇಗನೆ ಹರಿಯುವುದರಿಂದ ಬಹಳ ದಿನ ಬರುವುದಿಲ್ಲ. ಸಮಯದ ಮುಂದಾಲೋಚನೆ ಮಾಡಿ ಚಿತ್ರ ಕಲಾವಿದರ ಪರದೆಯೆ ಮೌಲ್ಯ ಇಂದು ಕುಸಿದಿದೆ. ಕಡಿಮೆ ಸಮಯದಲ್ಲಿ ತಂತ್ರಜ್ಞಾನ ಸಹಾಯದಿಂದ ಹಲವಾರು ದೃಶ್ಯವನ್ನು ಬೇಗನೆ ಮಾಡಬಹುದು. ಆದ್ದರಿಂದ ರಂಗ ಪರದೆ ಚಿತ್ರಕಲಾವಿದರು ತಮ್ಮ ಕೈ ಚಳಕ ಎಷ್ಟು ತೋರಿಸಿದರು ಅದರ ಮೌಲ್ಯ ಕಡಿಮೆ ಆಗಿದೆ ಎಂದರೆ ತಪ್ಪಾಗಲಾರದು.

ನಮ್ಮ ರಾಜ್ಯದಲ್ಲಿ ಕರ್ನಾಟಕದದಲ್ಲಿ ನಾಟಕ ರಂಗ ಪರದೆ ಚಿತ್ರಕಲಾವಿದರಿಂದು ಕೇವಲ ಬೆರಳಣಿಯಷ್ಟು ಮಾತ್ರ ಕಾಣಸಿಗುತ್ತಾರೆ. ಆದರೆ ಅವರ ಕಲೆಗೆ ತಕ್ಕ ಬೆಲೆ ದೊರೆಯದಂತಾಗಿದೆ. ಇದಕ್ಕೆ ಮುಖ್ಯ ಕಾರಣ ಆಧುನಿಕ ತಂತ್ರಜ್ಞಾನ ಬಂದಿರುವುದರಿಂದ ಡಿಜಿಟಲೀಕರಣ ನಾವು ಅಳವಡಿಸಿಕೊಳ್ಳುತ್ತಿರುವುದರಿಂದ ನಾಟಕ ರಂಗ ಪರದೆಯ ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶಿಸುವದಕ್ಕೆ ಉತ್ತಮವಾದ ಅವಕಾಶಗಳು ದೊರೆಯದಂತಾಗಿವೆ. ತಂತ್ರಜ್ಞಾನ ಬಳಸಿ ಮೂರೆ ನಿಮಿಷದಲ್ಲಿ ಚಿತ್ರವನ್ನು ಬಿಡಿಸಿ ಹೊರ ಹಾಕುತ್ತದೆ. ರಂಗ ಚಿತ್ರಕಲಾವಿದರ ಕಷ್ಟಪಟ್ಟು ಚಿತ್ರ ಬಿಡಿಸಿದರೆ ಅದಕ್ಕೆ ಉತ್ತಮವಾದ ಸಂಭಾವನೆ ದೊರೆಯುತ್ತಿಲ್ಲ. ಅವರು ಪಟ್ಟ ಪರಿಶ್ರಮಕ್ಕೆ ತಕ್ಕಂತೆ ಅವರಿಗೆ ಮಾನ್ಯತೆಯೂ ದೊರೆಯುತ್ತಿಲ್ಲ. ಆದರೂ ರಂಗ ಚಿತ್ರ ಕಲಾವಿದರು ಬರೆದ ಚಿತ್ರಕ್ಕೆ ಬೇಡಿಕೆ ಇದೆ. ಆಧುನಿಕ ತಂತ್ರಜ್ಞಾದಿಂದ ಪರದೆ ಚಿತ್ರಕಲಾವಿದರ ಸಂಖ್ಯೆ ತುಂಬಾನೆ ಕಡಿಮೆ ಆಗುತ್ತ ಬಂದಿದೆ.

ಒಟ್ಟಾರೆಯಾಗಿ ಇಂದು ರಂಗ ಕಲಾವಿದರು ನಮ್ಮ ಬದುಕನ್ನು ಬದಲಾಯಿಸುವ ಮತ್ತು ಸಮಾಜವನ್ನು ಉತ್ತಮ ರೀತಿಯಿಂದ ಮುನ್ನೆಡೆಸುವ ಆಶಯವನ್ನು ವ್ಯಕ್ತಪಡಿಸುತ್ತವೆ. ರಂಗಪರದೆಗಳು ತಮ್ಮದೆ ಆದ ಮಹತ್ವವನ್ನು

ಹೊಂದಿದ್ದು ಅವು ನಾಟಕಕ್ಕೆ ಜೀವ ತುಂಬುತ್ತವೆ. ಒಂದು ಸುಂದರವಾದ ನಾಟಕಕ್ಕೆ ರಂಗ ಪರದೆ ತುಂಬಾ ಮಹತ್ವ. ರಂಗ ಪರದೆ ಚಿತ್ರಕಲಾವಿದರು ತಮ್ಮ ಕಲೆಯನ್ನು ಹೀಗೆ ಮುಂದುವರಿಸಬೇಕು. ಸರಕಾರ ನಾಟಕ ರಂಗ ಪರದೆ ಚಿತ್ರಕಲಾವಿದರನ್ನು ಒಂದು ಕಡೆ ಸೇರಿಸಿ ಅವರಿಗೆ ಪ್ರಶಸ್ತಿ, ಗೌರವ, ಘನತೆ ಮತ್ತು ತಿಂಗಳಿಗೆ ಪ್ರೋತ್ಸಾಹ ನೀಡುವುದಲ್ಲದೇ, ರಂಗ ಪರದೆ ತಯಾರಿಸುವ ಚಿತ್ರ ಶಾಲೆ ಪ್ರಾರಂಭವಾಗಬೇಕು. ಯುವ ರಂಗ ಪರದೆ ಕಲಾವಿದರಿಗೆ ಉಚಿತ ತರಬೇತಿಯನ್ನು ಸರಕಾರ ಏರ್ಪಡಿಸಬೇಕು. ಅಂದಾಗ ಮಾತ್ರ ನಾಟಕ ರಂಗ ಪರದೆ ಮತ್ತು ಚಿತ್ರ ಕಲಾವಿದರು ಜೀವಂತಿಕೆಯಿಂದ ಇರಲು ಸಾಧ್ಯ.

**ಆಕರ ಗ್ರಂಥಗಳು:**


1. ರಂಗ ಸಜ್ಜಿಕೆ: ದೇವರಾಜ ಕಳಸದ
2. ಸೌಂದರ್ಯ ಶಾಸ್ತ್ರ: (ಸಂ) ಡಾ. ಕಾಶೀನಾಥ ಅಂಬಲಗೆ
3. ನಾಟಕ ರಂಗಪರದೆ ಚಿತ್ರಕಲಾವಿದ: ರಾಮು ರಘುರವರ ಜೀವನ ಮತ್ತು ಕಲಾಕೃತಿಗಳು – ಅರವಿಂದ ವಿ.ಟೋಣಪೆ 2016–17